ಹೆಂ೮-154
7-P-2

Regd No BG 155 22-9-1969

53 rd Year of Publication

SATYAVADI

Daily

MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಆರಮನೆ ಶಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಬೆಳೆ ವಿಮಾ ಕಾರ್ಯ ಜಾರಿಗೆ ಬರಲಿ

ನಾಟಕಕ್ಕೆ ಬಹುಮಾನ

ಪಾಟ್ನಾ— ಯುನೆಸ್ಕೊದ ಭಾರತ ಕೇಂದ್ರ ನಾಟಕ ಸಂಘವು ಈ ವರ್ಷದ ನಾಟಕಕ್ಕೆ ರೂ 5000 ಬಹುಮಾನ ಕೊಡಲು ನಿರ್ಧರಿಸಿದೆ.

★

"ಸತ್ಯವಾದಿ" ಯ ಸ್ವರ್ಣೋತ್ಸವ

28-9-1969 ಭಾನುವಾರ
ಬೆಳಿಗ್ಗೆ 10 ಗಂಟೆಗೆ
ಮೈಸೂರು 4, ಚಾಮರಾಜಪುರಂನಲ್ಲಿನ
'ಸತ್ಯವಾದಿ' ಆಫೀಸಿನಲ್ಲಿ

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮಿತ್ತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯೈ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ.ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಕೃತಜ್ಞತಾಪೂರ್ವಕ ನಂಬಿಸುತ್ತೇವೆ.

ಆಕ್ಸಿ ಬಂತು

ಕಲ್ಲೀಕೋಟೆ— ಒಂದು ಹಡಗು 10 ಸಾವಿರ ಟ್ಟ ಅಕ್ಸಿ ತಂದಿತು – ಕಳೆದ ವಾರ ಸಂಯುಕ್ತ ಅರಬ್ ಪ್ರಜಾರಾಜ್ಯದಿಂದ 15 ಸಾವಿರ ಟ್ಟ ಅಕ್ಸಿ ಬಂದಿತು.

★

ಅನಿರೀಕ್ಷ ಭೇಟಿ

ಷಿಲಾಂಗ್— ಪ್ರಧಾನಿ ಇಂದಿರಾರವರು ನಿನ್ನೆ ಇಲ್ಲಿಗೆ ಅನಿರೀಕ್ಷ ಭೇಟಿ ಕೊಟ್ಟು ಅಲ್ಲಿ ಎರಡನೇ ಎಸ್ಟೇ ಶೋದ್ಧಿಕರಣ ಸಂಸ್ಥೆ ಸ್ಥಾಪನೆಗಾಗಿ ಸತ್ಯಾಗ್ರಹ ಬೆದರಿಕೆ ವಿಷಯದಲ್ಲಿ ಮುಖ್ಯ ಮಂತ್ರಿ ಮಂತ್ರಿ ಮತ್ತು ಗೌರ್ನರರೊಡನೆ ಪರ್ಯಾಲೋಚನೆ ನಡೆಸಿದರು.

★

ಬೆಳೆ ವಿಮೆ

ಬೊಂಬಾಯಿ— ರಾಷ್ಟ್ರೀಕರಣ ಬ್ಯಾಂಕುಗಳು ದೇಶದ ಸ್ವಯಂಸಾಯಗಾರರಿಗೆ ಸಹಾಯ ಮಾಡುವ ಪದ್ಧತಿಯನ್ನು ಅನುಸರಿಸಿ ಬೆಳೆ ವಿಮೆ ಜಾರಿಗೆ ತರಬೇಕೆಂದು ಎಸ್ ಕೆ ಪಾಟೀಲ್ ಎಂ ಪಿ ಹೇಳಿದರು.

★

ಸಾಮೂಹಿಕ ಸಂಸ್ಥೆ ಮಾಡಲು

ಲಕ್ನೊ— ಕಾಂಗ್ರೆಸ್ಸನ್ನು ಸಾಮೂಹಿಕ ಸಂಸ್ಥೆ ಮಾಡಲು, ಕೆಲ ವ್ಯಕ್ತಿಗಳ ಹಿಡಿತದಿಂದ ತಪ್ಪಿಸಬೇಕೆಂದು ಕೇಂದ್ರ ಆಹಾರ ಮಂತ್ರಿ ಜಗಜೀವನರಾಂ ಹೇಳಿದರು.

○

ಖಾಯಂ ಶಾಂತಿ ನೆಲೆಸಲು

ವಿಶ್ವಸಂಸ್ಥೆ — ಮಧ್ಯಪೂರ್ವದಲ್ಲಿ ಖಾಯಂ ಶಾಂತಿ ನೆಲೆಸಲು ನಾಲ್ಕು ಪ್ರಬಲ ರಾಷ್ಟ್ರಗಳು ಮತ್ತೆ ಚರ್ಚಿಸಲಿವೆ.

ಅಧ್ಯಕ್ಷರೂ ಗಗನಕ್ಕೆ

ವಾಷಿಂಗ್ಟನ್— 1976 ರಲ್ಲಿ ಅಮೇರಿಕಾ ಸ್ವಾತಂತ್ರ್ಯದ ಎರಡನೇ ಶತಮಾನೋತ್ಸವ ಕಾಲದಲ್ಲಿ ಅಮೆರಿಕಾ ಅಧ್ಯಕ್ಷರನ್ನು ಬಹಿರಾಕಾಶಕ್ಕೆ ಕರೆದೊಯ್ಯಬಹುದೆಂದು ಆ ಸಂಸ್ಥೆಯ ಅಧಿಕಾರಿಗಳ ಅಭಿಪ್ರಾಯ.

★

ಸರಿಯಾದ ಮಾತು

ಬೆಂಗಳೂರು— ನಮ್ಮ ಖಾಸಗಿ ಜೀವನದಲ್ಲಿ ಗಾಂಧೀಜಿಯರ ಆದರ್ಶವನ್ನು ಅನುಸರಿಸಲು ಸಿದ್ಧವಿಲ್ಲದಿದ್ದರೆ ನಾವು ಗಾಂಧಿ ಶತಮಾನೋತ್ಸವ ಆಚರಿಸಲು ಯಾವ ಹಕ್ಕೂ ಇಲ್ಲವೆಂದು ಮೈಸೂರು ವಿಶ್ವವಿದ್ಯಾನಿಲಯದ ಉಪ ಕುಲಪತಿ ಡಾ ॥ ಶ್ರೀನಾಮಲಿ ಹೇಳಿದರು.

○

ಗಾಂಧಿ ನೋಟು, ನಾಣ್ಯ

ಬೊಂಬಾಯಿ— ಗಾಂಧಿ ಶತಮಾನೋತ್ಸವ ಜ್ಞಾಪಕಾರ್ಥವಾಗಿ, ಆ್ಯಬರು 2 ರಂದು ರಿಜರ್ವು ಬ್ಯಾಂಕು ಹೊಸ ಸೀರೀಸಿನ ಬ್ಯಾಂಕುನೋಟು ಮತ್ತು ಬಿಡುಗಡೆ ಮಾಡಲಿದೆ. ಹೊಸ ನೋಟು ರೂ 2, 5 10 ಮತ್ತು 100 ರದ್ದು ; ನಾಣ್ಯಗಳು ರೂ 10, 1, 50 ಪೈಸ, 20 ಪೈಸಾಗಳದ್ದು : ರೂ 10 ಶೇಕಡ 80 ಬೆಳ್ಳಿಯೊಡನೆ ತಾಮ್ರ ಬೆರಸಿದ ಲೋಹದ್ದು, ಮಿಕ್ಕ ನಾಣ್ಯ ಎಂದಿನಂತೆಯೇ ಇರುವವು ; ರೂ 1 ರ ನೋಟೂ ಪ್ರಕಟವಾಗಬಹುದು.

●

ಕಮ್ಯುನಿಸ್ಟರ ಬಂಧನ

ಮದ್ರಾಲೀಪಟ್ಟಣ— ಡಿವಿ ತಾಲ್ಲೂಕಿನ ಒಂದು ಸಕ್ಕರೆ ಕಾರ್ಖಾನೆಯ ಭೂಮಿ ಆಕ್ರಮಿಸಿದ್ದರು – 24 ಮಂದಿ ಬಂಧಿಸಲ್ಪಟ್ಟರು.

ಅಂತರ ಪಾರ್ಲಿಮೆಂಟು ಸಮ್ಮೇಳನ

ನವದೆಹಲಿ— ಎರಡನೇ ಅಂತರ ಪಾರ್ಲಿಮೆಂಟು ಸಮ್ಮೇಳನವನ್ನು ಅಧ್ಯಕ್ಷ ಗಿರಿಯವರು ಉದ್ಘಾಟಿಸುವರು - ವಿವಿಧ ದೇಶಗಳ 70 ಪಾರ್ಲಿಮೆಂಟುಗಳ 600 ಪ್ರತಿನಿಧಿಗಳು ಬರುವ ನಿರೀಕ್ಷೆ ಇದೆ – ಆಕ್ಟೋಬರು 30 ರಂದು ಇದರ ಪ್ರಾರಂಭ.

●

ದೇವಾಲಯ ಶುದ್ಧಿ ಪ್ರಯತ್ನ

ಕೊಂಬೊ— ಟ್ರಿಂಕಾಮಲಿಯಲ್ಲಿರುವ ಕ್ರಿ ಪೂ ಕಾಲದ ಐತಿಹಾಸಿಕ ಕೋಣೇಶ್ವರ ದೇವಾಲಯವನ್ನು ಶುಡುವ ಪ್ರಯತ್ನ ನಡೆಯಿತು – ದೇವಾಲಯದ ಬಾಗಲಲ್ಲಿ ಟೈರುಗಳನ್ನು ಹತ್ತಿಸಿ ಇಡಲಾಗಿತ್ತು ; ಆದರೆ ಬೇಗೆ ಆರಿಸಲಾಯಿತು – ಈ ದೇವಸ್ಥಾನದಲ್ಲಿ ಕೆಲ ದಿನಗಳಹಿಂದೆ ದೇವರ ಕಿರೀಟವೂ ದೇವಿಯ ತಾಳಿಯೂ ಕಳುವಾಗಿತ್ತು.

★

ಎಲ್ ಐ ಸಿ

ಮೈಸೂರು— ಬೆಂಗಳೂರು ವಿಭಾಗದಲ್ಲಿನ ಶಾಖೆಗಳಲ್ಲಿ ಅತಿ ಹೆಚ್ಚು ವಹಿವಾಟು ನಡೆಸಿದ ಮೈಸೂರು ಶಾಖೆಯ ಮ್ಯಾನೇಜರು ಶ್ರೀ ನಾಗರಾಜ್ ಮತ್ತು ಅಸಿಸ್ಟೆಂಟ್ ಮ್ಯಾನೇಜರ್ ಶ್ರೀ ಶಿವಾನಂದಸ್ವಾಮಿಯವರು ಪ್ರಥಮ ಬಹುಮಾನಗಳನ್ನು ಪಡೆದರು.

●

ಶಾಂತಿ ಶಿಸ್ತಿಗೆ ಸೈನ್ಯ ಬಂದಿದೆ

ಅಹಮದಾಬಾದು— ಗಲಭೆಯಲ್ಲಿ 200 ಮಂದಿ ಸಾವೂ ನೋವೂ ಆಗಿದೆ – ಲೂಟಿ, ಅಗ್ನಿಸ್ಪರ್ಶ ಹಿಂಸಾಕಾರ್ಯಗಳು ನಡೆಯುತ್ತಿವೆ – ಶಾಂತಿ ಶಿಸ್ತು ಪಾಲನೆಗೆ ಸೈನ್ಯ ಬಂದಿದೆ – ಗಲಭೆ ಬರೋಡಾಕ್ಕೂ ಹರಡಿದೆ.

"Bank Road Bahusar – A Fair Price Shop in Actual Practice"

ಗಿರಿಯವರ ವಿರುದ್ಧ ಅರ್ಜಿ

ನವದೆಹಲಿ— ಅಧ್ಯಕ್ಷ ಶ್ರೀ ಗಿರಿಯವರ ವಿರುದ್ಧದ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟಿನಲ್ಲಿ ನವೆಂಬರು 3 ರಂದು ವಿಚಾರಣೆಗಿಡಲಾಗಿದೆ

ಪ್ರಧಾನಿ ಪದವಿ ಮೇಲೆ ಕಣ್ಣಿಟ್ಟಿಲ್ಲ

ಬೊಂಬಾಯಿ— ತಾವು ಪ್ರಧಾನಿ ಪದವಿಯ ಮೇಲೆ ತಾವು ಎಂದೂ ಕಣ್ಣಿಟ್ಟಿಲ್ಲವೆಂದು ಭಾರತ ಗೃಹ ಮಂತ್ರಿ ಶ್ರೀ ಚವ್ಹಣ ಹೇಳಿದರು.

ವುಡ್‌ಲ್ಯಾಂಡ್ಸ್ ಜಯಪ್ರದ 3ನೇ ವಾರ

— ಅತ್ಯಾಕರ್ಷಣೀಯ ಈಸ್ಟ್‌ಮ್ಯಾನ್ ಕಲರ್ ಹಿಂದಿ ಚಿತ್ರ —

ಸಾಜನ್ ಕಿ SAAJAN

ನಟವರ್ಗ— ಮನೋಜ್‌ಕುಮಾರ್, ಆಶಾ ಪರೀಖ್, ಓಂ ಪ್ರಕಾಶ್
ಮದನಪುರಿ, ಶಬ್‌ನಮ್

ನಿರ್ದೇಶನ : ಮೋಹನ್ ಸೇಗಾಲ್ ಸಂಗೀತ : ಲಕ್ಷ್ಮೀಕಾಂತ ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಆಪೆರಾ— ಅಮೋಘ 3ನೇ ವಾರ

— ಚಿತ್ತಾಕರ್ಷಕ ಈಸ್ಟ್‌ಮೆನ್ ಕಲರ್ ಹಿಂದಿ ಚಿತ್ರ ....

ಮಹಲ್

ತಾರಾ— ದೇವಾನಂದ್, ಆಶಾ ಪರೀಖ್, ಅಭಿ ಭಟ್ಟಾಚಾರ್ಯ
ಡೇವಿಡ್, ಅಜಾದ್, ಸುಧೀರ್

ನಿರ್ದೇಶನ— ಶೇಖರ್ ಮುಖರ್ಜಿ ಸಂಗೀತ— ಕಲ್ಯಾಣ್‌ಜೀ ಆನಂದ್‌ಜಿ

ದಿನ 3 ಆಟಗಳು

Golden Jubilee of 'Satyavadi'

Sunday 28–9–1969

at 'Satyavadi' office Chamarajapuram, Mysore 4.

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwarak Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah Sri Madhav Shenoi Sri Opera Talkies Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimhaiyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore

ಸಂಕಿಪ್ತ ಟೆಂಡರ್ ಪ್ರಕಟಣೆ

ನಂ. (1) ತಾ|| 9–9–69

ಈ ಕೆಳಗೆ ನಮೂದಿಸಿರುವ ಕೆಲಸಗಳಿಗಾಗಿ, ಮೈಸೂರು ಪಿ. ಡಬ್ಲ್ಯು. ಡಿ: ಯಲ್ಲಿ ರಜಿಸ್ಟರ್ ಆಗಿ ಅಂಗೀಕರಿಸಲ್ಪಟ್ಟಿರುವ ಕಂಟ್ರಾಕ್ಟರ್‌ಗಳಿಂದ, ವಿಧಾಯಕವಾದ ಫಾರ್ಮಿನಲ್ಲಿ ಕೆಲಸದ ಹೆಸರನ್ನು ನಮೂದು ಮಾಡಿರುವ, ದ್ವಿಪ್ರತಿಗಳಲ್ಲಿ ಮೊಹರಾದ ಕೊಟೇಷನ್‌ಗಳನ್ನು ಆಹ್ವಾನಿಸಲಾಗಿದೆ. ಅವುಗಳನ್ನು ಮೈಸೂರು–1 ರಲ್ಲಿರುವ ಕಟ್ಟಡಗಳ ವಿಭಾಗದ ಎಕ್ಸಿಕ್ಯುಟೀವ್ ಇಂಜಿನಿಯರ್ ರವರು ತಮ್ಮ ಕಚೇರಿಯಲ್ಲಿ ತಾ|| 26–9–1969 ರ ಮಧ್ಯಾಹ್ನ 4 ಘಂಟೆ ವರೆಗೆ ಸ್ವೀಕರಿಸುವರು. ಅದೇ ದಿವಸ ಸಾಧ್ಯವಾದರೆ ಟೆಂಡರುಗಳನ್ನು ಒಡೆಯಲಾಗುವುದು. ಖಾಲಿ ಟೆಂಡರ್ ಫಾರಂಗಳನ್ನು ತಾ|| 22–9–1969 ರಿಂದ 25–9–1969 ರ ವರೆಗೆ (ಎರಡು ದಿನಗಳೂ ಸೇರಿ) ಪ್ರತಿ ಫಾರಂ ಬೆಲೆ 5/– ರೂಪಾಯಿ ಪಾವತಿ ಮಾಡುವವರಿಗೆ, ಕಚೇರಿ ವೇಳೆಯಲ್ಲಿ ಕೆಲಸ ನಡೆಯುವ ಎಲ್ಲಾ ದಿನಗಳಲ್ಲೂ ಮೈಸೂರು–1 ರಲ್ಲಿರುವ ಕಟ್ಟಡಗಳ ವಿಭಾಗದ ಎಕ್ಸಿಕ್ಯುಟೀವ್ ಇಂಜಿನಿಯರ್‌ರವರು ಒದಗಿಸುತ್ತಾರೆ. ಕೆಲಸಗಳ ವಿಷಯದಲ್ಲಿ ಹೆಚ್ಚಿಗೆ ವಿವರಗಳನ್ನು ಮತ್ತು ಟೆಂಡರ್ ನಿಯಮಗಳನ್ನು ಮೈಸೂರು–1 ರಲ್ಲಿರುವ ಕಟ್ಟಡಗಳ ವಿಭಾಗದ ಎಕ್ಸಿಕ್ಯುಟೀವ್ ಇಂಜಿನಿಯರ್‌ರವರಿಂದ ಪಡೆಯಬಹುದು.

ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನೂ ಯಾವ ಕಾರಣವನ್ನೂ ತಿಳಿಸದೆ ತಿರಸ್ಕರಿಸುವ ಹಕ್ಕು ಟೆಂಡರ್‌ರನ್ನು ಅಂಗೀಕರಿಸುವ ಅಧಿಕಾರವುಳ್ಳವರಿಂದ ಕಾಯ್ದಿರಿಸಲ್ಪಟ್ಟಿದೆ.

ಸೀ. ನಂ.	ಕೆಲಸದ ಹೆಸರು	ಟೆಂಡರ್‌ಗೆ ಇಟ್ಟಿರುವ ಅಂದಾಜು ಮೊತ್ತ	ಇ.ಎಂ.ಡಿ.	ಕೆಲಸ ಮುಗಿಸಲು ಕಾಲಾವಧಿ	ಕಂಟ್ರಾಕ್ಟರ್ ವರ್ಗ
1.	ಮೈಸೂರಿನಲ್ಲಿ ಹಾಲು ಸರಬರಾಜು ಯೋಜನೆಗೆ ತಪಸೀಲಿನ ಪ್ರಕಾರ 6"x6" ಅಳತೆಯ ಫ್ಲೋರಿಂಗಿಗೆ ಆಸಿಡ್ ಮತ್ತು ಆಲ್ಕಲಿ ರಕ್ಷಣಾ ಹೆಂಚುಗಳನ್ನು ಸರಬರಾಜುಮಾಡುವುದು.	7200	180	2 ತಿಂಗಳು	ಪ್ರವೀಣಅನುಮೋದಿತ ಸಂಸ್ಥೆಗಳಿಂದ
2.	ಮೈಸೂರಿನಲ್ಲಿ ಹಾಲು ಸರಬರಾಜು ಯೋಜನೆಗೆ ತಪಸೀಲಿನ ಪ್ರಕಾರ 1' x 1' ರ ಆರ್ಧ ಕ್ಯಾಸ್ ಸೆಕ್ಷನ್‌ನಿನ ಕ್ಯಾಸ್ಟ್ ಐರನ್ ಏರ್‌ಫ್ಲೋ ರೇಟೆಡ್ ಹೆಂಚುಗಳನ್ನು ಸರಬರಾಜು ಮಾಡುವುದು.	28000	700	ಡಿಟ್ಟೋ	ಡಿಟ್ಟೋ

ಸಹಿ/– ವೈ. ಶಿವಪ್ಪ,
ಎಕ್ಸಿಕ್ಯುಟೀವ್ ಇಂಜಿನಿಯರ್, ಕಟ್ಟಡಗಳ ವಿಭಾಗ.